1017

ಫಾರೆಸ್ಟ್.

ಇಸ್ತಿಹಾರ್ನಾಮೆ.

ತಾರೀಖು 16ನೆ ಜೂ೯ 1904.

ನಂ. 932—10404, ಸ೯ 1900ನೆ ಇಸವಿಯ XIನೆ ನಂಬರ್ ಮೈಸೂರ ಫಾರೆಸ್ಟ್ ರೆಗ್ಯುಲೇಷನಿನ 30ನೆ ಸೆಕ್ಷ೯ ಅನುಸರಿಸಿ, 1900ನೆ ಡಿಸೆಂಬರ್ 31ನೆ ಮುಕ್ಕಂ 405—ಫಾ. ಫೈ. 39-95ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಫಾಯಿಷಾಗಿರುವ ಮೇರೆ ಸರ್ಕೋಡು ಸ್ಟೇಟ್ ಫಾರೆಸ್ಟಿನಲ್ಲಿ ಸೇರಿಸಲ್ಪಟ್ಟಿದ್ದ ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಖಾಂಡ್ಯದ ಹೋಬಳಿ ಕುಂದೂರು ಗ್ರಾಮದ ಸರ್ವೆ ನಂ. 124ರ ಉತ್ತರ ದಿಕ್ಕಿನ ಕೊನೆಯಲ್ಲಿ ಸುಮಾರು 70 ಎಕರೆಗಳು ವಿಸ್ತೀರ್ಣವುಳ್ಳ ಕಿರಿ ಅಗಲದ ಜಮೀನನ್ನು ಫಾರೆಸ್ಟಿನಿಂದ ವಜಾ ಮಾಡಿರುತ್ತೆ. ಮತ್ತು ಈ ಇಸ್ತಿಹಾರ್ನಾಮೆಯ ತಾರೀಖಿನ ಲಾಗಾಯತು ಉಲಿಗೆಹಳ್ಳದ ಆಚೆ ಸರ್ಕೋಡು ಸ್ಟೇಟ್ ಫಾರೆಸ್ಟಿನ ಭಾಗವಾಗಿರತಕ್ಕದ್ದನ್ನ ಮನ್ನಾ ಮಾಡಿರುತ್ತೆ.

ಹುಕುಂ ಬಮೋಜೀಬ್,
ಎಂ. ಮುತ್ತಣ್ಣ,
ಫಾರೆಸ್ಟ್ ಇಲಾಖೆಯ ಗವರ್ನಮೆಂಟ್ ಅಫೀಷಿಯೇಟಿಂಗ್ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್‌ನಾಮೆ.

ತಾರೀಖು 16ನೆ ಜೂ೯ 1904.

ನಂ. 3839—ಮುಜರೈ. ಫೈ. 36—94, ಚನ್ನಪಟ್ಟಣದ ಇದರಡೀ ಕಂಡ ಮುಸಲ್ಮಾನರ ನಿವಾಸಿಗಳು ಚನ್ನಪಟ್ಟಣದಲ್ಲಿರುವ ಆಖಲ್‌ಷಾ ಖಾದ್ರಿ ಮಕ್ತಾನಿನ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬ್ಯೆ ನಾಜರ್—ಎ—ಬಿ—ಕಾಫಗಳಾಗಿ ನೊಕರರ್‌ಆ ಡಲ್ಪಟ್ಟಿರುತ್ತಾರೆ:—

ಜಾಬೂವಿನಾರ್ಯಸಾಹೇಬರು.
ಸೈಯದ್ ಮೊಹದೀಷಾ ಖಾದ್ರಿ ಸಾಹೇಬರು.
ಹಯಾತ್ ಬಾದ್‌ಷಾ ಖಾದ್ರಿ ಸಾಹೇಬರು.
ಸೈಯದ್ ಹುಸೇ ಖಾದ್ರಿ ಸಾಹೇಬರು.
ಸೈಯದ್ ಮುಸ್ತ್ಯಾಷಾ ಖಾದ್ರಿ ಸಾಹೇಬರು.

ತಾರೀಖು 20ನೆ ಜೂ೯ 1904.

ನಂ. 3923, ಮಿ॥ ಎಲ್. ಅನಂತಸಾಮಿರಾವ್, ಬಿ. ಎ., ಯವರು ಮಿ|| ಎಂ. ಶಾಮರಾವ್, ಎಂ. ಎ., ಯವರಿಂದ 1904ನೆ ಜೂ೯ 18ನೆ ತಾರೀಖಿನ ಮಧ್ಯಾಹ್ನಾತ್ಪರ ಮುಜರೈ ಇಲಾಖಾ ಗವರ್ನಮೆಂಟ್ ಸೆಕ್ರೆಟರಿ ಉದ್ಯೋಗದ ಚಾರ್ಜನ್ನು ವಹಿಸಿರುತ್ತಾರೆ.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಸೆಕ್ರೆಟರಿ.

ಜಿಯೊಲಾಜಿಕಲ್.

ಇಸ್ತಿಹಾರ್‌ನಾಮೆ.

ತಾರೀಖು 10ನೆ ಜೂ೯ 1904.

ನಂ. 777—S, ಸ೯ 1897ನೆ ಇಸವಿ ಮೈಸೂರು ಕೀಮೆ ಗಣಿ ಸಂಬಂಧದ 3ನೆ ನಂಬರು ರೆಗ್ಯುಲೇಷನಿನ 2 (4)ನೆ ಸೆಕ್ಷ೯ನ್ನು ಅನುಸರಿಸಿ, ಮೈಸೂರು ಕೀಮೆಯ ಘನವನ್ನು ಹೊಂದಿದ ಶ್ರೀಮ೯ ಮಹಾರಾಜರವರ ಸರ್ಕಾರದವರು ಜಾರಯಲ್ಲಿ ತರಬೇಕೆಂದು ಉದ್ದೇಶಿಸಿರುವ ಇದರಡೀ ಕಂಡ ಮಸೂದೆ ಇಸ್ತಿಹಾರ್‌ನಾಮೆಯು ಜನಗಳ ತಿಳುವಳಿಕೆ ಬ್ಯೆ ಪ್ರಕಟಿಸಲ್ಪಟ್ಟಿರುತ್ತೆ.

2. ಸದರಿ ಇಸ್ತಿಹಾರ್‌ನಾಮೆಗೆ ಸಂಬಂಧಪಟ್ಟ ವಿಷಯದಲ್ಲಿ ಆಭ್ಯಂತರಗಳು ಅಥವಾ ಸಲಹೆಗಳು ಏನಾದರೂ ಇದ್ದರೆ ಅವುಗಳನ್ನು ಸ೯ 1904ನೆ ಇಸವಿ ಸೆಪ್ಟಂಬರು 15ನೆ ತಾರೀಖಿನ ವಳಗಾಗಿ ಘನವನ್ನು ಹೊಂದಿದ ಶ್ರೀಮ೯ ಮಹಾರಾಜರವರ ಸರ್ಕಾರದ ಜಿಯೊಲಾಜಿಕಲ್ ಇಲಾಖಾ ಸೆಕ್ರೆಟರಿ ಸಾಹೇಬರವರಿಗೆ ತಿಳಿಸಿದಲ್ಲಿ ಅವುಗಳು ಆಲೋಚಿಸಲ್ಪಡುತ್ತವೆ.

[ಮೈಸೂದೆ.

ಇಸ್ತಿಹಾರ್.]

ತಾರೀಖು 13 ಜೂ೯ 1904.

ಸ೯ 1897ನೆ ಇಸವಿ ಮೈಸೂರು ಕೀಮೆ ಗಣಿ ಸಂಬಂಧದ IIIನೆ ನಂಬರು ರೆಗ್ಯುಲೇಷ೯ 2 (4) ನೆ ಸೆಕ್ಷ೯ನ್ನು ಅನುಸರಿಸಿ, ಘನವನ್ನು ಹೊಂದಿದ ಶ್ರೀಮ೯ ಮಹಾರಾಜರವರ ಸರ್ಕಾರದವರು "ಕಲ್ಲು ಇದ್ದಲು" ಸ೯ 1897ನೆ ಇಸವಿ ಡಿಸೆಂಬರು 11ನೆ ತಾರೀಖು ನಂ. 6751—ಮಿನ್. 1405ನೆ ಇಸ್ತಿಹಾರ್‌ನಾಮೆಯಲ್ಲಿ ನಮೂದಿಸಲ್ಪಟ್ಟಿರುವ ಮತ್ತು ಮೇಲ್ಕಂಡ ರೆಗ್ಯುಲೇಷ೯ನಿನ 4, 7 ಮತ್ತು 8ನೆ ಸೆಕ್ಷ೯ಗಳ ನಿಬಂಧನೆಗಳಿಗೆ ಶೇರಿಸಲ್ಪಟ್ಟ ಪ್ರಮೇಗಳಲ್ಲಿ "ಗಣಿ ಪದಾರ್ಥ" (Mining Material) ಕ್ಕೆ ಶೇರಿಸಲ್ಪಟ್ಟಿರುತ್ತೆಂದು ಹುಕುಂ ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಎಫ್. ಸ್ಮೀತ್,
ಮೈಸೂರು ಗವರ್ನಮೆಂಟ್ ಜಿಯೊಲಾಜಿಕಲ್ ಇಲಾಖಾ ಸೆಕ್ರೆಟರಿ.